**SC No. 34/2018**
**PW.-26**

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

ಎಸ್.ಸಿ. 34/2018

| | | |
|---|---|---|
| ಸಾಕ್ಷಿದಾರರ ಹೆಸರು | ಮಹೇಶ್ ನಾಯಕ್ | ಪ್ರಮಾಣ ವಚನ ಮಾಡಿದ |
| ತಂದೆಯ ಹೆಸರು | ಮಹದೇವ್ | ದಿನಾಂಕ: 11.11.2025 |
| ವಯಸ್ಸು | 47 ವರ್ಷ | |
| ವೃತ್ತಿ | ರಿಯಲ್ ಇಸ್ಟೇಟ್ | ಪ್ರಾ.ಸಾಃ 26 |
| ವಾಸ ಸ್ಥಳ | ನಾಯ್ಡು ನಗರ ಮೈಸೂರು | ಚಾ.ಸಾಃ 34 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ಈಗ್ಗೆ 10 ವರ್ಷಗಳ ಹಿಂದೆ ಮೈಸೂರಿನ ಕೆಸರೆ ವಾಸಿ ಅಲ್ಲಬಕ್ಷಾ ರವರಿಂದ ಮೈಸೂರಿನ ಕ್ಯಾತಮಾರನಹಳ್ಳಿ ಹುಡ್ಕೊ ಬಡಾವಣೆ 3 ನೇ ಹಂತದಲ್ಲಿ ಇರುವ LIG 1 ಮನೆ ನಂಬರ್ 562 ರಲ್ಲಿರುವ ಕಟ್ಟಡವನ್ನು ರೂ. 15,00,000/- ಖರೀದಿಸಿದ್ದೆನು. ನಾನು ಅ ಕಟ್ಟಡವನ್ನು ಖರೀದಿ ಮಾಡಿದಾಗ ಮಳಿಗೆಯಲ್ಲಿ ಇಮ್ರಾನ್ ಎಂಬುವವರು ಅಂಗಡಿ ಇಟ್ಟುಕೊಂಡಿರಲಿಲ್ಲ. ನಾನು ಆ ಮನೆಯನ್ನು ಮತ್ತು ಮಳಿಗೆಯನ್ನು ಖರೀದಿ ಮಾಡಿದಾಗ ಖಾಲಿ ಇತ್ತು. ಆ ಕಟ್ಟಡದಲ್ಲಿ ಯಾರು ಬಾಡಿಗೆದಾರರು ಇರಲಿಲ್ಲ. ನಾನು ಆ ಮನೆಯನ್ನು ಮೊಹಮ್ಮದ್ ನೂರ್ ಎಂಬುವವರಿಗೆ ರೂ 3,00,000/- ಗಳಿಗೆ ಬೋಗ್ಯಕ್ಕೆ ನೀಡಿದ್ದೆ. ಅದಕ್ಕೆ ಅವರು ಮಳಿಗೆಯಲ್ಲಿ ತನಗೆ ವಯಸ್ಸಾಗಿರುತ್ತದೆ ಅಕ್ಕಿ ಅಂಗಡಿಯನ್ನ ಇಟ್ಟು ಕೊಳ್ಳುತ್ತೇನೆ ಎಂದು ಹೇಳಿದ್ದರು ಆದರೆ ಅವರು ಇಟ್ಟುಕೊಂಡಿರಲಿಲ್ಲ. ಸುಮಾರು ದಿನ

ಖಾಲಿ ಇತ್ತು. ಅವರು ಖಾಲಿ ಮಾಡಿದ್ದರು ನಾನು ಆ ಮಳಿಗೆಯನ್ನು ಮಾರಾಟ ಮಾಡಿರುತ್ತೇನೆ. ನನಗೆ ಜಮೀಲ್ ಆಗಲಿ ಅಥವಾ ಇಮ್ರಾನ್ ಆಗಲೀ ಗೊತ್ತಿರುವುದಿಲ್ಲ. ಎಂ.ಎನ್. ನೂರ್ ರವರು ತನಗೆ ಅಕ್ಕಿ ಅಂಗಡಿ ಇಟ್ಟುಕೊಳ್ಳಲು ಸಾಧ್ಯವಾಗುತ್ತಿಲ್ಲ ಹಿಂದೆ ಮೊಬೈಲ್ ಅಂಗಡಿ ಇಟ್ಟುಕೊಂಡಿದ್ದ ಜಮೀರ್ ರವರ ಅಣ್ಣ ಇಮ್ರಾನ್ ರವರು ಮಳಿಗೆಯನ್ನು ಬಾಡಿಗೆ ಕೇಳುತ್ತಿದ್ದರು ಬಾಡಿಗೆ ನೀಡಲು ಏನಾದರೂ ಅಭ್ಯಂತರ ಇದೆಯೇ ಎಂದು ನನಗೆ ಕೇಳಿರಲಿಲ್ಲ. ನಾನು ಪೊಲೀಸರ ಮುಂದೆ ಈ ಮೇಲೆ ಏನು ಹೇಳಿರುತ್ತೇನೆಯೋ ಅದೇ ರೀತಿ ಹೇಳಿದ್ದೆ. ಸದರಿ ಮಳಿಗೆಯನ್ನು ರಿಯಲ್ ಇಸ್ಟೇಟ್ ಕಛೇರಿ ಮಾಡುವ ಸಲುವಾಗಿ ಬಾಡಿಗೆಗೆ ಕೊಟ್ಟಿರಲಿಲ್ಲ. ನನಗೆ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವುದೆ ಮಾಹಿತಿ ಇರುವುದಿಲ್ಲ.

**ಈ ಹಂತದಲ್ಲಿ , ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ದಿನಾಂಕ 22.07.2014 ರಂದು ಹುಡ್ಕೋ ಬಡಾವಣೆಯಲ್ಲಿ ಇರುವ ಮನೆಯನ್ನು ಎಂ.ಎನ್ ನೂರ್ ರವರಿಗೆ ಅಕ್ಕಿ ಅಂಗಡಿಯನ್ನು ಇಡಲು ಕೊಟ್ಟಿದ್ದು ಅವರು ಅಕ್ಕಿ ಅಂಗಡಿ ಇಡಲು ಸಾಧ್ಯವಾಗದೇ ಇದ್ದುದರಿಂದ ಅದನ್ನು ಇಮ್ರಾನ್ ಎಂಬುವರಿಗೆ ಮೊಬೈಲ್ ಅಂಗಡಿ ಇಟ್ಟುಕೊಳ್ಳಲು ನೀಡಿದ್ದು ಪ್ರತಿ ತಿಂಗಳು ಬಾಡಿಗೆ ಹಣ ರೂ 1,500/-

ಗಳನ್ನು ನೂರ್ ಇಕ್ಬಲ್ ರವರೇ ಪಡೆದುಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಾನು ನೂರ್ ರವರಿಂದ ರೂ. 7,000/– ರೂ ಅಡ್ವಾನ್ಸ್ ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. 5–6 ತಿಂಗಳ ನಂತರ ಬಾಡಿಗೆ ಸರಿಯಾಗಿ ಕೊಡದೇ ಇದ್ದುದರಿಂದ ಇಮ್ರಾನ್ ರವರನ್ನು ನಾನೇ ಖಾಲಿ ಮಾಡಿಸಿದ್ದೆ ಎಂದರೆ ಸರಿಯಲ್ಲ. ಭೋಗ್ಯದ ಅವಧಿ ಮುಗಿದ ಮೇಲೆ ಎಂ.ಎನ್. ನೂರ್ ರವರು ರಿಯಾಜ್ ಪಾಷಾ ರವರ ಮನೆಗೆ ಬಾಡಿಗೆಗೆ ಹೋಗಿದ್ದರು ಎಂದರೆ ಸರಿಯಲ್ಲ. ನಾನು ಸದರಿ ಮಳಿಗೆಯನ್ನು ಸಾಧಿಕ್ ಪಾಷಾರವರಿಗೆ ಬಾಡಿಗೆ ನೀಡಿದ್ದೆ ಎಂದರೆ ಸರಿಯಲ್ಲ. ಸದರಿಯವರು ಅಲ್ಲಿ ರಿಯಲ್ ಎಸ್ಟೇಟ್ ಕಛೇರಿಯನ್ನಾಗಿ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಈಗ ಓದಿ ಹೇಳಿದ ನಿಪಿ–40 ರಂತೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದ :**

**ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರುವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**